# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1185

ಮಾನ್ಯ ಸದಸ್ಯರ ಹೆಸರು : ಶ್ರೀ ಭೀಮರಾವ್ ಬಸವರಾಜ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು)

ಉತ್ತರಿಸುವ ದಿನಾಂಕ : 19.12.2024

ಉತ್ತರಿಸುವವರು : ಮಾನ್ಯ ಮುಖ್ಯಮಂತ್ರಿಗಳು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ದಿನಾಂಕ:01.07.2022 ರಿಂದ 31.07.2024ರ ಅವಧಿಯಲ್ಲಿ ನಿವೃತ್ತರಾದ ನೌಕರರಿಗೆ ಡಿ.ಸಿ.ಆರ್.ಜಿ, ಕಮ್ಯುಟೇಶನ್, ಗಳಿಕೆ ರಜೆ ನಗದೀಕರಣ ಮೊತ್ತವನ್ನು 7ನೇ ವೇತನ ಆಯೋಗದ ಲೆಕ್ಕಾಚಾರದಲ್ಲಿ ಪರಿಷ್ಕರಿಸುವ ಆದೇಶ ಹೊರಡಿಸುವ ಸಂಬಂದ ನಿವೃತ್ತ ನೌಕರರು ಹೋರಾಟ/ಧರಣಿ/ಸತ್ಯಾಗ್ರಹ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯಾ; | ಇಲ್ಲ.<br><br>7ನೇ ರಾಜ್ಯ ವೇತನ ಆಯೋಗದ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸುವಲ್ಲಿ ಸರ್ಕಾರದ ರಾಜಸ್ವ ನೀತಿಯನ್ನು ಗಮನದಲ್ಲಿರಿಸಿ ಆಯೋಗದ ಶಿಫಾರಸ್ಸಿನಂತೆ ರಾಜ್ಯ ಸರ್ಕಾರಿ ನೌಕರರ ವೇತನ, ಭತ್ಯೆ ಮತ್ತು ಪಿಂಚಣಿಗಳನ್ನು ದಿನಾಂಕ:1.7.2022 ರಿಂದ ಅನ್ವಯಿಸುವಂತೆ ಪರಿಷ್ಕರಿಸಿ ದಿನಾಂಕ: 1.8.2024 ರಿಂದ ಜಾರಿಗೆ ಬರುವಂತೆ ಅನುಷ್ಠಾನಗೊಳಿಸಲಾಗಿರುತ್ತದೆ. ಇದು ಸರ್ಕಾರದ ನೀತಿ ನಿರ್ಣಯವಾಗಿರುತ್ತದೆ. |
| ಆ) | ಬಂದಿದಲ್ಲಿ ಸರ್ಕಾರದ ಪರಿಷ್ಕೃತ ಆದೇಶ ಹೊರಡಿಸಲು ಸರ್ಕಾರ ಕೈಗೊಂಡ ಕ್ರಮವೇನು; ಯಾವಾಗ ಪರಿಷ್ಕೃತ ಆದೇಶ ಹೊರಡಿಸಲಾಗುವುದು?; | ಈ ಮೇಲಿನ ನಿರ್ಧಾರದಂತೆ ಅಂದರೆ, 7 ರಾಜ್ಯ ವೇತನ ಆಯೋಗದ ಶಿಫಾರಸ್ಸುಗಳನ್ನು ದಿನಾಂಕ:1.8.2024 ರಿಂದ ಅನುಷ್ಠಾನಗೊಳಿಸಿರುವುದರಿಂದ, ದಿನಾಂಕ: 1.7.2022 ರಿಂದ ದಿನಾಂಕ:31.7.2024 ರ ಅವಧಿಯಲ್ಲಿನ ನಿವೃತ್ತರಾದ ನೌಕರರ ಪ್ರಕರಣಗಳಲ್ಲಿ ನೌಕರರ ನಿವೃತ್ತಿ ಸಮಯದಲ್ಲಿ, ನಿಯಮಾನುಸಾರ ಲಭ್ಯವಿರುವ DCRG, ಪರಿವರ್ತಿತ ಪಿಂಚಣಿ, ಗಳಿಕೆ ರಜೆ ನಗದೀಕರಣ ಸೌಲಭ್ಯಗಳನ್ನು ಅವರು ಪಡೆಯುತ್ತಿರುವ 2018ರ ಪರಿಷ್ಕೃತ ವೇತನ ಶ್ರೇಣಿಯಲ್ಲಿನ ಮೂಲ |

| | | |
|---|---|---|
| | | ವೇತನವನ್ನು ಆಧಾರವಾಗಿರಿಸಿ ಪಾವತಿ ಮಾಡತಕ್ಕದ್ದಾಗಿರುತ್ತದೆ. ಆದಾಗ್ಯೂ, ಈ ಅವಧಿಯಲ್ಲಿ ನಿವೃತ್ತರಾದ ನೌಕರರ ಪ್ರಕರಣಗಳಲ್ಲಿ, ಅವರ ಪಿಂಚಣಿಯನ್ನು ಪರಿಷ್ಕೃತ ವೇತನ ಶ್ರೇಣಿಯಲ್ಲಿನ ಅಂತಿಮ ಕಾಲ್ಪನಿಕ ವೇತನವನ್ನು ಆಧಾರವಾಗಿರಿಸಿ ಹೆಚ್ಚಿನ ಪಿಂಚಣಿಯನ್ನು ದಿನಾಂಕ: 1.8.2024 ರಿಂದ ಪಾವತಿಸಲು ನಿಯಮಗಳಲ್ಲಿ ಅವಕಾಶ ಕಲ್ಪಿಸಲಾಗಿರುತ್ತದೆ. ಸರ್ಕಾರದ ಈ ನಿರ್ಧಾರವು ನೌಕರರಿಗೆ ಲಾಭದಾಯಕವಾಗಿರುತ್ತದೆ ಮತ್ತು ಈ ಅವಧಿಯಲ್ಲಿನ ನಿವೃತ್ತ ನೌಕರರಿಗೆ ನಿಯಮಾನುಸಾರ ಯಾವುದೇ ಅಸಮಾನತೆ ಉಂಟಾಗಿರುವುದಿಲ್ಲ. |

ಆಇ-ಪಿಇಎನ್/410/2024

(ಸಿದ್ದರಾಮಯ್ಯ)
ಮುಖ್ಯಮಂತ್ರಿ